# ಕರ್ನಾಟಕ ಸರ್ಕಾರ

ಇ.ಸಂಖ್ಯೆ:ಜಸಂಇ 35 ಪಿಎಸಿ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:05.06.2024.

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.

ಮಾನ್ಯರೇ,

**ವಿಷಯ:** ಕಾಮಗಾರಿಯಲ್ಲಿ ಬಳಕೆ ಮಾಡುವ ಉಪ ಖನಿಜಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ರವಾನೆ ಪರವಾನಗಿ(MDP) ಪಡೆದು ಸಾಗಾಣಿಕೆಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಗಣಿ) ರವರ ಸಭಾ ಸೂಚನಾ ಪತ್ರ ದಿ:27.05.2024. (ಪ್ರತಿಯನ್ನು ಅಡಕಗಳ ಪ್ರತಿಗಳೊಂದಿಗೆ ಲಗತ್ತಿಸಿದೆ).

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ವಯಂವೇದ್ಯವಾಗಿರುವ ಉಲ್ಲೇಖಿತ ಪತ್ರದಲ್ಲಿ ಕಾಮಗಾರಿ ಗುತ್ತಿಗೆದಾರರು ಕಾಮಗಾರಿಯಲ್ಲಿ ಬಳಕೆ ಮಾಡುವ ಉಪ ಖನಿಜಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ರವಾನೆ ಪರವಾನಗಿ (MDP) ಪಡೆದು ಸಾಗಾಣಿಕೆ ಮಾಡಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳದೆ ಕಾಮಗಾರಿಗಳ ಬಿಲ್ಲುಗಳಲ್ಲಿ ರಾಜಧನವನ್ನು ಮಾತ್ರ ಕಟಾಯಿಸುವುದನ್ನು ಹಾಗೂ ಕಾಮಗಾರಿ ಅನುಷ್ಠಾನ ಇಲಾಖೆಗಳಲ್ಲಿ ಬಳಸುವ ಉಪಖನಿಜಗಳನ್ನು ಖನಿಜ ರವಾನೆ ಪರವಾನಗಿ ರಹಿತವಾಗಿ ಬಳಸುವ ಅಭ್ಯಾಸವನ್ನು ನಿಲ್ಲಿಸುವಂತೆ ಹಾಗೂ ಕೆಎಂಎಂಸಿ ನಿಯಮಗಳು, 1994 ನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರದೇ ರಾಜಧನವನ್ನು ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಬಿಲ್ಲಿನಲ್ಲಿ ದಂಡರಹಿತವಾಗಿ ಕಟಾಯಿಸುವುದನ್ನು ನಿಲ್ಲಿಸುವುದರ ಬಗ್ಗೆ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ತಮ್ಮ ನಿಗಮಗಳಡಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರು ಬಳಸುತ್ತಿರುವ ಖನಿಜ/ಉಪಖನಿಜಗಳನ್ನು ಎಲ್ಲಿಂದ ಪಡೆಯಲಾಗುತ್ತಿದೆ ಯಾವ ಕಾಮಗಾರಿಗೆ ಬಳಸಲಾಗುತ್ತಿದೆ ಹಾಗೂ ಇದಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ರವಾನೆ ಪರವಾನಗಿ(MDP) ಪಡೆದಿರುವ ಸಂಪೂರ್ಣ ವಿವರಗಳನ್ನು **ದಿ:10.06.2024** ರೊಳಗಾಗಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

***ಅಡಕ:*** *ಮೇಲಿನಂತೆ*

ತಮ್ಮ ವಿಶ್ವಾಸಿ,

**(ವನಿತಾಮಣಿ)** 05/06/2024
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ(ತಾಂ-4).